
# ಅಪರಾಧಿಗಳು



ನಮ್ಮ ಕಾಮವು
ವಿಶೇಷವಾಗಿ ಯಾವ ರಾಷ್ಟ್ರಕ್ಕೂ ಸೇರಿರದ
ಬಹುವರ್ಣ ಪತಾಕೆಗಳ ಹಾಗಿದ್ದ
ಒಂದು ಕಾಲವಿತ್ತು.

ಸ್ಫಟಿಕದಂತಹ ಕಣ್ಣುಗಳೊಡನೆ
ದಣಿದು ಬಳಲಿದ ನಾವು
ಶಯ್ಯೆಯಲಿ ಮಲಗಿದೆವು.
ಸತ್ತುಹೋದ ಹಸುಳೆಗಳು
ಬಿಟ್ಟುಹೋದ ಆಟಿಕೆಗಳಂತೆ
ನಾವು ಪರಸ್ಪರ ಕೇಳಿದೆವು:
ಉಪಯೋಗ ಏನು?
ಪ್ರಯೋಜನ ಏನು?

ನಡುಹಗಲು
ಅಪರಾಧಿಗಳು
ಮಣ್ಣಿನ ಗಟ್ಟಿಗಳನು ಅಗೆದು
ಪುಡಿ ಪುಡಿ ಮಾಡುವ ಹಾಗೆ
ಪರಸ್ಪರ ಒಬ್ಬೊಬ್ಬರ
ಅವಯವಗಳನು ತುಂಡರಿಸುತ್ತಿದ್ದೆವು.
ನಮ್ಮ ಪ್ರಣಯ
ಇಂಥ ಬಗೆಯದಾಗಿತ್ತು.

ನಾವು
ಉರಿದು ಕೆಂಡವಾದ
ಸೂರ್ಯನ ಕೆಳಗಿನ ಭೂಮಿಯಾಗಿದ್ದೆವು.
ನಮ್ಮ ನರನಾಡಿಗಳಲ್ಲಿ ಸುಡುವ ಕಾವಿತ್ತು.
ಆ ಕಾವನ್ನು ತಣಿಸಲು
ಹಿಮಪರ್ವತಗಳಿಗೂ ಸಹ ಆಗಲಿಲ್ಲ.
ನಾನೂ ಅವನೂ ಒಂದಾಗಿದ್ದಾಗ
ನಾವು ಹೆಣ್ಣೋ ಗಂಡೋ ಆಗಿರಲಿಲ್ಲ.
ಯಾವೊಂದು ಮಾತುಗಳು ಉಳಿದಿರಲಿಲ್ಲ.
ಎಲ್ಲಾ ಮಾತುಗಳು
ರಾತ್ರಿಯ ಪ್ರಾಯವೇರುವ ತೋಳುಗಳಲ್ಲಿ
ಬಂಧಿಯಾಗಿದ್ದವು.
ಕತ್ತಲಲ್ಲಿ ನಾವು ಬೆಳೆದೆವು,
ಮೌನದಲ್ಲೆಂಬಂತೆ ನಾವು ಹಾಡಿದೆವು.
ಸಮುದ್ರದಿಂದ
ಗಾಳಿಯಿಂದ
ಭೂಮಿಯಿಂದ
ಪ್ರತಿ ದುಃಖಪೂರ್ಣ ಇರುಳಿನಿಂದ
ನೋವಿನ ಹಾಗೆ
ಒಂದೊಂದು ಹಾಡು ಹೊಮ್ಮುತ್ತಿತ್ತು.